...o M 1299 SATYAVADI Founded 1917
The Oldest Newspaper of Mysore

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 31 ಸಂಚಿಕೆ 219] ಗುರುವಾರ 12—8—48 [ಬಿಡಿ ಪ್ರತಿ 3 ಪೈ

ಮದರಾಸು ಪ್ರಾಂತದಾದಂತ ಫಾಸಿ ಶಿಕ್ಷೆಯನ್ನು ನಿಲಿಸುವುದಿಲ್ಲ

ಹೈದರಾಬಾದಿಗೆ ಮೈಸೂರಿನಿಂ ಹೋಗಿರುವ ಮುಸ್ಲಿಂರ ಸಂಖ್ಯೆ ೧೦೦೦೦೦.

ಮಹಾರಾಜರಲ್ಲಿ ಮನವಿ

ಮೈಸೂರು ಶ್ರೀಮನ್ಮಹಾರಾಜರು ಎಕ್ಸ್‌ಪೈರಿ ಕಮಿಟೇಸ್ ಸ್ಪೆಷಲ್ ಪ್ರಾವಿಷನ್ಸ್ (ಎರಡನೇ ತಿದ್ದುಪಡಿ) [ಎಮರ್ಜನ್ಸಿ] ಆಕ್ಟ್ 1948 ನ್ನು ಮೈಸೂರು ಸರ್ಕಾರವು ಜಾರಿಗೆ ತಂದಿರುವುದು ಸಂಸ್ಥಾನದ ಅತ್ಯುನ್ನತ ನ್ಯಾಯಪೀಠವಾದ ಹೈಕೋರ್ಟಿನ ಅಧಿಕಾರಕ್ಕೆ ಚ್ಯುತಿ ಬರುವ ರೀತಿಯಲ್ಲಿರುವುದರಿಂದ ಮೈಸೂರು ಸರ್ಕಾರವು ತನಗಿರುವಿ ಶಾಸನಾಧಿಕಾರವನ್ನು ಅನುಚಿತವಾಗಿ ಪ್ರಯೋಗಿಸಿದಂತಾಗಿರುವುದರಿಂದ ವಾಪಸುಪಡೆಯಬೇಕು ಎಂಬ ನಿರ್ಣಯ ಶಿವಮೊಗ್ಗ ಲಾಯರ್ ಸಂಘದಲ್ಲಿ ಪಾಸಾಯಿತು.

ಮೈಸೂರಿಗೆ ಆಗಮಿಸುವ ರಾಜಾಜಿ ಜಲಪುರಿ ಮತ್ತು ಆದಿಕರ್ನಾಟಕಪುರಗಳಿಗೆ ಭೇಟಿಕೊಡುವರೆಂದು ಗೊತ್ತಾಗಿದೆ.

ವರ್ತಮಾನ ಸಂಗ್ರಹ

ಹೈದರಾಬಾದ್ ಮತ್ತು ಕಾಶ್ಮೀರ ಸಮಸ್ಯೆಗಳ ಬಗ್ಗೆ ಭಾರತ ಸರ್ಕಾರನಿಲುವನ್ನು ಸಮರ್ಥಿಸುವ ನಿರ್ಣಯ ಮೈಸೂರು ಸಂಸ್ಥಾನ ಮುಸ್ಲಿಂ ಲೀಗ್ ಕೌನ್ಸಿಲ್ ಸಮಾವೇಶದಲ್ಲಿ ಮಂಜೂರಾಯಿತೆಂದು ಬೆಂಗಳೂರು ವರದಿ.

ಗಾಂಧೀಜೀ ಕೊಲೆ ಮೊಕದ್ದಮೆಯಲ್ಲಿ ಪ್ರಾಸಿಕ್ಯೂಷನ್ ಸಾಕ್ಷ್ಯ ಸೆಪ್ಟೆಂಬರ್ ಮಧ್ಯ ಭಾಗದಲ್ಲಿ ಮುಗಿಯುವುದು.

ಲಿಂಗಾಯಿತ ಮತ್ತು ಬ್ರಾಹ್ಮಣ ಕೋಮುಗಳಲ್ಲಿ ನವಯುವತಿಯರು ಹೇರಳವಾಗಿದ್ದಾರೆ. ಅವರನ್ನು, ಅವರ ಆಸ್ತಿಪಾಸ್ತಿಗಳನ್ನು ಭೋಗಿಸಿ ಎಂದು ನಿಜಾಂ ಸರಕಾರದ ಹರಿಜನ ಮಂತ್ರಿ ಮತ್ತು ಅವರ ಅನುಯಾಯಿಗಳು ಹರಿಜನರಿಗೆ ದುರ್ಬೋಧನೆ ಮಾಡುತ್ತಿದ್ದಾರೆ.

ಪ್ರಥಮ ಸ್ವಾತಂತ್ರ್ಯ ಪಾರ್ಶಿಕೋತ್ಸವ ಪ್ರಯುಕ್ತ

ವುಡ್‌ಲ್ಯಾಂಡ್ಸ್ 13-8-48 ರಿಂದ

We Two ನಾವು ಇಬ್ಬರು

(ತಮಿಳು) (ಪ್ರತಿದಿನ 3 ಆಟಗಳು)

ಸುಪ್ರಸಿದ್ಧ ಕವಿ ಭಾರತಿಯವರ ರಾಷ್ಟ್ರಗೀತೆ ! ಪಟ್ಟಮ್ಮಾಳ್ ಹಾಡುಗಾರಿಕೆ !
ಕಿಕ್ಕಿರಿದ ಜನಸಂದಣಿಯಿಂದ ನೂರು ದಿನಗಳ ದಿಗ್ವಿಜಯ ಪಡೆದ ಶ್ರೇಷ್ಠ ಚಿತ್ರ

ಪಾತ್ರ : ಟಿ. ಆರ್. ಮಹಾಲಿಂಗಂ ಬಿ. ಆರ್. ಪಂತಲು ಸಾರಂಗಪಾಣಿ
ಟಿ. ಯಂ. ಜಯಲಕ್ಷ್ಮಿ ಬೇಬಿ ಕಮಲ [ಜಯಮಣಿ ರಿಲೀಸ್]

ಹೈದರಾಬಾದಿಗೆ ಹೊರಗಿನಿಂ
ಆಗಮಿಸಿರುವ ಮುಸ್ಲಿಂರ ಸಂ
೧೫೦೦೦೦೦.

ವಾರ್ತೆಗಳು

ಅಮೇರಿಕಾ ನೈಸ್-ಕಾರ್ಖಾನೆಯ ಶ್ರೀ ಸತ್ಯನ್ನಿ ಜರ್ನಲಿಸ್ಟ್ಸ್ ಅಂಡ್ ಮೈಸೂರು ಪತ್ರಿಕೋದ್ಯೋಗಿ ಸಂಘಕ್ಕೆ ನಿನ್ನೆ ಸಂಜೆ ಭೇಟಿಯಿತ್ತಿದ್ದರು.

ಬೇಸಗೆ ರಜೆಯ ನಂತರ ತಮ್ಮ ಸಂಸ್ಥಾನದಲ್ಲಿರುವ ಜಾತೀಯ ಶಾಲೆಗಳನ್ನೆಲ್ಲಾ ಮುಚ್ಚಲು ಜೋಧಪುರ ಸರ್ಕಾರ ನಿರ್ಣಯಿಸಿರುವುದು. ಅವು ಸಾರ್ವಜನಿಕ ಶಾಲೆಗಳಾಗುವುವು. ಎಲ್ಲಾ ಜಾತಿಯ ಹುಡುಗರಿಗೂ ಅಲ್ಲಿ ಪ್ರವೇಶ ಸಿಕ್ಕುವುದು.

ಮೈಸೂರು ವಿಶ್ವವಿದ್ಯಾನಿಲಯದ ಸೆಪ್ಟೆಂಬರ್ ಉಪ ಪರೀಕ್ಷೆಗಳು ಮುಂದುವರಿಯಬೇಕೆಂದು ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯಕರ್ತರುಗಳು ವಿದ್ಯಾಧಿಕಾರಿಗಳಿಗೆ ಮನವಿ ಅರ್ಪಿಸಿರುವ ಬೆಂಗಳೂರು ಸುದ್ದಿ.

ಈ ದಿವಸ ನಡೆಯುವ ಕಾಲದ ಮೊಕದ್ದಮೆಯ ಕಾಲದಲ್ಲಿ ಬೆಂಗಳೂರು ವಕೀಲ ಸಂಘದ ಪ್ರತಿನಿಧಿಯೊಬ್ಬರು ಸಲಹೆಗಳನ್ನು ಕೊಡಲು ಹೈಕೋರ್ಟು ಅಪ್ಪಣೆಯಿತ್ತಿದೆ.

ಮದರಾಸು, ಆ 11 — ಮದರಾಸಿನಲ್ಲಿ ಮರಣದಂಡನೆ ನಜ ಮಾಡುವ ಯೋಜನೆ ಇಲ್ಲ. ಈ ಬಗ್ಗೆ ಶಾಸನ ಜಾರಿ ಮಾಡುವುದರಲ್ಲಿ ಸರ್ಕಾರಕ್ಕೆ ಏನೂ ವಿವೇಕತೆ ಕಂಡುಬಂದಿಲ್ಲ ಎಂದು ಬಂದೀಕಾನೆ ಮಂತ್ರಿ ಶ್ರೀ ಮಾಧವಮೆನನ್ ಶಾಸನ ಸಭೆಯಲ್ಲಿ ತಿಳಿಸಿದ್ದಾರೆ.

ಮದರಾಸು, ಆ 11 — ಸಾರ್ವಜನಿಕ ಶಿಸ್ತಿನ ಮಸೂದೆಯು ಜನರ ಸ್ವಾತಂತ್ರ್ಯಕ್ಕೆ ಧಕ್ಕೆ ತರತಕ್ಕದ್ದಾಗಿದೆ ಎಂದು ಮಾಜಿ ಮಂತ್ರಿ ಡಾ | ಸುಬ್ಬರಾಯರ್ ಖಂಡಿಸಿರುವರು.

ಮದರಾಸು ಆ 11 — ಹಿಂದೀ ತರಗತಿಗಳನ್ನು ಬಹಿಷ್ಕರಿಸಲು ಚಳುವಳಿಯು 2 ನೇ ದಿನದಲ್ಲಿ 10 ಮಂದಿ ಜಾರ್ಜ್ ಟೌನ್ ಹೈಸ್ಕೂಲ್ ಮುಂದೆ ಪಿಕೆಟ್ ನಡೆಸಿದರು

ಅನಂತಪುರ — ಅನಂತಪುರದಲ್ಲಿ ಗೋಹತ್ಯೆ ನಿರೋಧಿಸುವ ಠರಾವು ಪೌರಸಭೆಯಲ್ಲಿ ಮಂಜೂರಾಯಿತು.

ದೆಹಲಿ, ಆ 10 — ಹಿಂದೂ ಕೋಡು ಜಾರಿ ತರುವ ವಿಷಯದಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಭಿನ್ನಾಭಿಪ್ರಾಯವಿದ್ದೆ

ಶಿವಾಜಿ ಅರಮನೆ

ಬ್ರಿಟಿಷರು ದಂಗೆಯ ಕಾಲದಲ್ಲಿ ಶಿವಾಜಿ ಅರಮನೆಯನ್ನು ವಶಪಡಿಸಿಕೊಂಡಿದ್ದರು. ಭವಾನಿಯನ್ನು ಕಿತ್ತುಹಾಕಿದ್ದರು. ಸದ್ಯ ಸತಾರೆಯ ಸಾಹು ಮಹಾರಾಜರು ಆ ಅರಮನೆಯನ್ನು ಬಿಟ್ಟುಕೊಡಬೇಕೆಂದೂ, ಅಲ್ಲಿ ಭವಾನಿಯನ್ನು ಪ್ರತಿಷ್ಠಿಸಬೇಕಾಗಿದೆಯೆಂದೂ ಕೇಳಿದ್ದಕ್ಕೆ ಮುಂಬೈ ಮಂತ್ರಿಗಳು ಒಪ್ಪಿದ್ದಾರೆ,

ಉಚಿತ ಬುದ್ಧಿವಾದ

ದಕ್ಷಿಣದ ಮುಸ್ಲಿಂ ಮುಖಂಡ ಎ. ಎಂ. ಅಲ್ಲಪಿಚ್ಚಿಯವರು ಹೈದರಾಬಾದಿನ ಮುಸ್ಲಿಂರಿಗೆ—'ದುರ್ಬುದ್ಧಿಗೆ ಸಹಾಯಮಾಡಬೇಡಿರಿ ; ಜಿನ್ನರು ಹೈದರಾಬಾದಿನ ಮೂಲಕ ಹಿಂದೂಸ್ಥಾನಕ್ಕೆ ತೊಂದರೆ ಕೊಡಬೇಕೆಂದು ಹಂಚಿಕೆ ಹೂಡಿದ್ದಾರೆ. ಅವರಿಗೆ ಯೂನಿಯನ್ ಮುಸ್ಲಿಮರ ಕ್ಷೇಮವಿಚಾರವೇನೂ ಇಲ್ಲ : [illegible] ಅವರ ಮಾತಿನಂತೆ ಕುಣಿಯುವುದ[illegible] ಕೆಡಕಿದೆ' ಎಂದು ಹೇಳಿರುವರು.

[illegible]ಡೆದೊಕ್ಕೆಸಿ ಅಥವಾ ಸಮಾನತ್ವ

ಆದರೆ ಈ ಸಮಾನತ್ವವು ಒಂದು ಸೋಪಾನ ಮಾತ್ರವೇ. ಸಂಘದಲ್ಲಿರುವವರೆಲ್ಲರೂ ಉತ್ಪತ್ತಿ ಸಾಧನೆಗಳ ಮೇಲೆ ಸಮಾನತ್ವ ಅಂದರೆ ಸಮಾನ ಕಷ್ಟ, ಸಮಾನಭೋಗಗಳು ದೊರೆತನಂತರ ಮುಂದಿನ ಸೋಪಾನವು ಯಾವುದೆಂದರೆ 'ಪ್ರತಿಯೊಬ್ಬನಿಂದ ಅವನ ಶಕ್ತಿಯನ್ನನುಸರಿಸಿ, ಪ್ರತಿಯೊಬ್ಬರಿಗೂ ಅವರ ಅವಶ್ಯಕತೆಯನ್ನನುಸರಿಸಿ ಎಂದರಿಯುವುದು ಎ ಐ ಲೆನ್ಕ್

ಸೂಚನೆ— ಶ್ರೀ ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ನಾಳೆ ಪತ್ರಿಕೆ ಪ್ರಕಟಿಸಲ್ಪಡುವುದಿಲ್ಲ

At Opera

ವಿ ಶ್ವಾ ಸ್

14—8—48 ರಿಂದ

ವಿ. ಎ. ಜಲ್ಲಪ್ಪ—ಟಿ. ಪಿ ರಾಜಲಕ್ಷ್ಮಿ ಕೃಷ್ಣ — ಮಧುರ ಪಾತ್ರವಹಿಸಿರುವ

ಪ ರ ಂ ಜ್ಯೋ ತಿ

(ಅಮೋಘ ತಮಿಳು ಚಿತ್ರ)

.... ಪ್ರತಿದಿನ 3 ಆಟಗಳು ....

Morning Shows from 13-8-48

SMOKY

ಅಗ್ನಿ ಅನಾಹುತ

ಮುಂಬಯಿಯಲ್ಲಿರುವ 'ಮೂನ ಮಿಲ್' ಎಂಬ ಬಟ್ಟೆ ಗಿರಣಿಗೆ ಅಚಾನಕ ಬೆಂಕಿ ಹತ್ತಿ ಸುಮಾರು 55 ಲಕ್ಷ ರೂಪಾಯಿಯ ಹಾನಿಯಾಗಿರುವದೆಂದು ಅಂದಾಜು ಮಾಡಲಾಗಿದೆ. ಇದೀ ಗಿರಣಿಯೆ [illegible]ಟ್ಟ ಒಂದಿಯಾಗಿದ್ದು ಏನೂ ಪ್ರಾಣಹಾನಿಯಾಗಿಲ್ಲವೆಂದು ಹೇಳಲಾಗಿದೆ ; ಈ ಗಿರಣಿಯಲ್ಲಿ ಸುಮಾರು 6 ಸಾವಿರ ಕೆಲಸಗಾರರಿದ್ದಾರಂತೆ

ತ್ರಿವರ್ಣ ಧ್ವಜ

ಭಾರತ ಸರಕಾರವು— ಕಟ್ಟಡಗಳ ಮೇಲೆ, ಮೋಟಾರು ಕಾರುಗಳ ಮೇಲೆ ತ್ರಿವರ್ಣ ಧ್ವಜವನ್ನು ಏರಿಸಬಾರದೆಂದು ತಿಳಿಸಿದೆ, ರಾಷ್ಟ್ರೀಯ ಧ್ವಜವು ಸರಕಾರಿ ಕಟ್ಟಡ ಹೈಕೋರ್ಟ್ ಸೆಕ್ರಿಟೇರಿಯಟ್ ಕಮಿಷನರ ಆಫೀಸು, ಕಲೆಕ್ಟರರ ಆಫೀಸು, ಜೈಲು, ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಮುನಿಸಿಪಲಿಟಿಗಳ ಮೇಲೆ ಏರಿಸಲ್ಪಡಬೇಕೆಂದು ಪ್ರಕಟಿಸಿದೆ. ಇದಲ್ಲದೆ ಮಂತ್ರಿಗಳ ವಾಸಸ್ಥಳದ ಮೇಲೂ ಪರರಾಷ್ಟ್ರದಲ್ಲಿರುವ ಪ್ರತಿನಿಧಿಗಳ ಕಛೇರಿಯ ಮೇಲೂ ಗವರ್ನರ್ ಜನರಲ್ ನಿವಾಸಸ್ಥಾನದ ಮೇಲೂ ಮತ್ತು ಕಛೇರಿ ಮೇಲೂ ಗವರ್ನರರ ಕಛೇರಿ ಮೇಲೂ ಏರಿಸಲ್ಪಡಬೇಕು ವಿಶೇಷ ಪ್ರಸಂಗಗಳಲ್ಲಿ ಅಂದರೆ ಸ್ವಾತಂತ್ರ್ಯ ದಿನಾಚರಣೆ, ಜನವರಿ 26, ಗಾಂಧೀಜೀ ಹುಟ್ಟುಹಬ್ಬಗಳಲ್ಲಿ ಯಾವ ನಿರ್ಬಂಧವೂ ಇಲ್ಲದೆ ಉಪಯೋಗಿಸಬಹುದು. ಯಾವುದೇ ಉದ್ಯೋಗದಂಧೆಗಳ ಕುರುಹು ಅಥವಾ ಟ್ರೇಡ್ ಮಾರ್ಕ್ ಎಂದು ರಾಷ್ಟ್ರಧ್ವಜವನ್ನು ಅನಧಿಕೃತ ರೀತಿಯಲ್ಲಿ ಉಪಯೋಗಿಸಕೂಡದು.

Woodlands

Morning Shows From 13-8-48

Grand Double Programme

United Artists presents

Little Iodine

& Susie Steps Out

Save the Cow

ಗೋ ವಧೆ ನಿಲ್ಲಲಿ

Edited, Printed and Published by M S Krishna Rao at th Satyavadi Press, Chamaraj Agrahar, Mysore.

ಮುಪ್ಪಿನ ಕಾಲದ ಬಡತನ—
ಆಶ್ರಿತರ ರಕ್ಷಣೆಯ ಚಿಂತೆ

ಈ ಸ್ವಾಭಾವಿಕ ಶತ್ರುಗಳ ಮೇಲೆ ವಿಜಯಪಡೆಯಲು ಅಪ್ರತಿಮ

ಜೀವವಿಮೆಯೊಂದೇ

ಆದುದರಿಂದ ಇಂದೇ

ಮೈಸೂರು ಸರಕಾರದ ವಿಮಾ ಇಲಾಖೆಯ ಪ್ರಜೆಗಳ ಶಾಖೆಯಲ್ಲಿ

ವಿಮೆ ಮಾಡಿರಿ

SHAKTI SUDHA

A Superb TONIC

ಹೊಸ ಬೆಳೆಯ, ಆರಿಸಿ ತೆಗೆದ, ಪರಿಶುದ್ಧವಾದ

ಶ್ರೀ 'ಓಂ' ಗುರುತಿನ ಕೇಸರಿ

ಈ ಓಂ ಗುರುತಿನ ಕೇಸರಿ ಅತಿ ಪರಿಶುದ್ಧವಾದುದಕ್ಕೆ ಗ್ಯಾರಂಟಿಯ[illegible] ಸ್ಪೇನಿನ ಕೇಸರಿ ಗಿಡಗಳಲ್ಲಿಯು ಹೂಗಳಿಂದ ಆರಿಸಿ ತೆಗೆದುದಾಗಿದ. ಸ್ಪೆಷಲ್ಲಾಗಿ ಆಮದು ಮಾಡಲ್ಪಟ್ಟಿರತಕ್ಕದ್ದು ಬಹು ಹೊಳಪು ಸುವಾಸನೆಯಿಂದಲೂ ಕೂಡಿದುದಾಗಿದೆ. ಏನೊಂದೂ ಅಕ್ಷೇಪಣೀಯ ರ್ಥಗಳೂ ಸೇರಿಲ್ಲ. ಮತ್ತು ಧಾರ್ಮಿಕವಾಗಿ ಪರಿಶುದ್ಧವಾಗಿದೆ. [illegible] ಗಳಲ್ಲಿಯೂ, ದೇವರ ಪೂಜೆಗೂ, ಔಷಧಗಳಿಗೂ, ಮತ್ತು ತಿಂಡಿಪ[illegible] ಗೂ ಉಪಯೋಗಿಸಲ್ಪಡಲು ಅರ್ಹವಾಗಿದೆಯೆಂದು ಶಿಫಾರಸ್ಸುಮಾ[illegible] ತೋಲಾ, ೫ ತೋಲಾ, ಡಬ್ಬಗಳಲ್ಲಿಯೂ, ಚಿಲ್ಲರೆಯಾಗಿಯೂ [illegible]ತ್ತದೆ. ಉಪಯೋಗಿಸಬೇಕಾಗಿ ವಿನಂತಿ

ವಲ್ಲಭದಾಸ್ ತೇಜ್‌ಪಾಲ್

೧೪ ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು